ಇಂಜಿನಿಯರಿಂಗ್ ವಿದ್ಯಾರ್ಥಿಗಳು:

1. ಶ್ರೀ ಜೆ.ಎಸ್. ಚಿತ್ರಪ್ಪ,
   ಎಸ್.ಓ,ಜೆ. ಶಿವಣ್ಣಪ್ಪ,
   ಬಿ.ಡಿ.ಟಿ. ಕಾಲೇಜು,
   ದಾವಣಗೆರೆ,
   ಚಿತ್ರದುರ್ಗ ಜಿಲ್ಲೆ.
2. ಶ್ರೀ ಟಿ.ಎನ್. ವೆಂಕಟೇಶ್ವರ ರಾವ್,
   ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು,
   ಬೆಂಗಳೂರು.
3. ಶ್ರೀ ಸತೀಶ ರಾಮಕೃಷ್ಣ ರಾವ್,
   ಹಾಸನ ಮಲ್ನಾಡ್ ಇಂಜಿನಿಯರಿಂಗ್ ಕಾಲೇಜು,
   ವಿದ್ಯಾರ್ಥಿ.
4. ಶ್ರೀ ಅನಿಲ್ ವಿಠಲ್ ಬರಿಕೇರಿ,
   3ನೇ ವರ್ಷದ ಬಿ.ಇ. ವಿದ್ಯಾರ್ಥಿ,
   ಗುಲ್ಬರ್ಗಾ.
5. ಕುಮಾರಿ. ಕಲ್ಪನಾ,
   ಡಿ.ಓ ರಾಧಕೃಷ್ಣ,
   ವಿಜಯನಗರ ಇಂಜಿನಿಯರಿಂಗ್ ಕಾಲೇಜು,
   ಬಳ್ಳಾರಿ.
6. ಶ್ರೀ ಜಿ. ಕಿರಣ್ ಕುಮಾರ್,
   ವಿದ್ಯಾರ್ಥಿ, ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು,
   ಮಂಡ್ಯ.

ಬೈಲ ಹೊಂಗಲ ನಗರದಲ್ಲಿ ಕಾಟೇಜ್ ಆಸ್ಪತ್ರೆ ಕಟ್ಟಡ ಸ್ಥಗಿತ.

3681 - ಶ್ರೀ ಶಿವಾನಂದ್ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವಿರೆ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಕಟ್ಟುತ್ತಿರುವ 50 ಹಾಸಿಗೆ ಆಸ್ಪತ್ರೆ ಕಟ್ಟಡ ಅರ್ಧಕ್ಕೆ ನಿಂತ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಟ್ಟಡ ಕೆಲಸವನ್ನು ಪೂರ್ಣ ಮುಗಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?

ಇ) ಈ ವರ್ಷ ಸದರಿ ಕೆಲಸಕ್ಕೆ ಆಯವ್ಯಯದಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದೆ ಮತ್ತು ಇದಕ್ಕೆ ಖರ್ಚಾದ ಹಣವೆಷ್ಟು?

ಈ) ಕಳೆದ ವರ್ಷ ಈ ಕಟ್ಟಡದ ಕೆಲಸ ಸಂಪೂರ್ಣವಾಗಿ ನಿಂತು ಹೋಗಿದ್ದ ಸಂಗತಿ ನಿಜವೇ?

ಉ) ಇಲ್ಲಿಯವರೆಗೆ ಈ ಕೆಲಸಕ್ಕೆ ಎಷ್ಟು ಹಣ ಖರ್ಚು ಆಗಿರುವುದು ಹಣಕಾಸಿನ ತೊಂದರೆಯಿಂದ ಈ ಕಟ್ಟಡದ ಕೆಲಸ ಅರ್ಧಕ್ಕೆ ನಿಂತ ಸಂಗತಿ ನಿಜವೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಬೆಳಗಾವಿ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ ಗುತ್ತಿಗೆದಾರರೊಂದಿಗೆ ವ್ಯವಹರಿಸಿ ಗುತ್ತೇದಾರರು ಕೆಲಸವನ್ನು ಪ್ರಾರಂಭಿಸಲು ಒಪ್ಪಿದ್ದಾರೆ.

ಇ) 1991-92ರ ಸಾಲಿಗೆ ಈ ಕಾಮಗಾರಿಗಾಗಿ 11.00 ಲಕ್ಷ ರೂ.ಗಳನ್ನು ಇರಿಸಲಾಗಿದೆ. ಜುಲೈ 1991ರ ಅಂತ್ಯದವರೆಗೆ ರೂ. 0.06 ಲಕ್ಷಗಳನ್ನು ಖರ್ಚು ಮಾಡಿದೆ.

ಈ) ನಿಜವಲ್ಲ. 1990-91ರ ಸಾಲಿನಲ್ಲಿ ರೂ.6.93 ಲಕ್ಷಗಳನ್ನು ಕಟ್ಟಡ ನಿರ್ಮಾಣಕ್ಕಾಗಿ ಖರ್ಚು ಮಾಡಿದೆ.

ಉ) ಜುಲೈ 1991ರ ಅಂತ್ಯದವರೆಗೆ ಒಟ್ಟು 20.92 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಹಣ ಕಾಸಿನ ತೊಂದರೆಯಿಂದ ಕಟ್ಟಡದ ಕೆಲಸ ಅರ್ಧಕ್ಕೆ ನಿಂತಿರುವುದಿಲ್ಲ.

ವಿಜಯ ನಗರ ಉಕ್ಕು ಕಾರ್ಖಾನೆಯನ್ನು ಜಂಟಿ ವಲಯದಲ್ಲಿ ಸ್ಥಾಪಿಸುವ ಬಗ್ಗೆ

3781- ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ವಿಜಯನಗರ ಉಕ್ಕು ಕಾರ್ಖಾನೆಯನ್ನು ಜಂಟಿ ವಲಯದಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರವು ಅನುಮತಿ ನೀಡಿದೆಯೇ?

ಆ) ಜಂಟಿ ವಲಯದಲ್ಲಿ ಈ ಯೋಜನೆಯನ್ನು ಅನುಮತಿ ಕೋರಿ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಅಭಿವೃದ್ಧಿ ನಿಗಮ ಕಳುಹಿಸಿದ ಸೂಚನೆಯನ್ನು ಕೇಂದ್ರ ಸರ್ಕಾರವು ಒಪ್ಪಿಕೊಳ್ಳಲಾಗಿದೆಯೇ.

ಇ) ಈ ಯೋಜನೆಗೆ ಎಷ್ಟು ಕೋಟಿ ರೂ. ತಗಲುವುದು ಮತ್ತು ಇನ್ನು ಎಷ್ಟು ದಿವಸಗಳಲ್ಲಿ ಈ ಕೆಲಸ ಪ್ರಾರಂಭವಾಗುವುದು.

ಈ) ಕೂಡಲೇ ಈ ಯೋಜನೆಯನ್ನು ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು ಮತ್ತು ಈ ವರ್ಷ ಎಷ್ಟು ಹಣ ಖರ್ಚು ಮಾಡಬೇಕೆಂದು ನಿಗಧಿಪಡಿಸಲಾಗಿದೆ?

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರೀಕಾ ಸಚಿವರು);

ಅ) ಭಾರತ ಸರ್ಕಾರದ ತನ್ನ ನೂತನ ಕೈಗಾರಿಕಾ ನೀತಿಯ ಅಡಿಯಲ್ಲಿ ಉಕ್ಕು ಸ್ಥಾವರಗಳನ್ನು ಪರವಾನಗಿರಹಿತ ಕೈಗಾರಿಕೆ ಎಂದು ತಿಳಿಸಿದೆ.

ಆದಕಾರಣ, ಈ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಅನುಮತಿ ಪಡೆಯುವ ಅಗತ್ಯವಿಲ್ಲ. ಈ ಘಟಕದ ಸ್ಥಾಪನೆಯನ್ನು ರಾಜ್ಯ ಸರ್ಕಾರದ ಕೆಎಸ್ಐಐಡಿಸಿ ನಿಗಮಕ್ಕೆ ವಹಿಸಿರುತ್ತದೆ.

ಆ) ಮೇಲಿರುವಂತೆ.